
ಒಂದೊಂದು ಕಡೆ ನೀಟಾಗಿ ಜೋಡಿಸಿಕೊಟ್ಟಿದ್ದ. ತನಗೂ ಜೋಡಿಸುವುದನ್ನು ಹೇಳಿಕೊಡುವಂತೆ ಕೇಳಿದ ಸಹನಾಳಿಗೆ, "ನಾನು ಹೇಳಿಕೊಡಲ್ಲ, ನೀನೇ ಜೋಡಿಸು ನೋಡಣ" ಎಂದು ಹೇಳಿ ನಕ್ಕಿದ್ದ. ಮಂಡಿಯಿಂದ ಮನೆಗೆ ಹೋಗುವಾಗ ರಾಹುಲ್ ಅದನ್ನು ಇಷ್ಟಪಟ್ಟಿದ್ದ ಸಹನಾಳಿಗೇ ಮನೆಗೆ ತೆಗೆದುಕೊಂಡು ಹೋಗಲು ಕೊಟ್ಟಿದ್ದ. ಹೀಗೆ ಸಹನಾಳ ಕೈ ಸೇರಿದ್ದ ರೂಬಿಕ್ಸ್ ಕ್ಯೂಬ್ ಒಂದು ನೆಪವಾಗಿ ಮನೆಯನ್ನು ಒಡೆದಿತ್ತು.

ನಂಜುಂಡನು ತಮ್ಮನಿಗೆ ಆಟಿಕೆಯ ವಿಷಯಕ್ಕೆ ಮನೆ ಒಡೆಯುವುದು ಬೇಡ ಎಂದು ತಿಳಿವಳಿಕೆ ಹೇಳಲು ನೋಡಿದ. ಒಂದೆರಡು ದಿವಸ ಅವರಿವರ ಹತ್ತಿರ ಬುದ್ಧಿ ಮಾತು ಹೇಳಿಸಲು ನೋಡಿದ. ಆದರೆ, ಯಾವುದಕ್ಕೂ ಜಗ್ಗದಿದ್ದಾಗ ಕೊನೆಗೆ ವಿಧಿಯಿಲ್ಲದೆ ಮನೆ, ಹೊಲ ಭಾಗ ಮಾಡಲು ಒಪ್ಪಿದ.



ಒಡೆದ ಮನಸ್ಸುಗಳ ನಡುವೆ ಗೋಡೆಯೆದ್ದಿತು. ಒಂದೇ ಮನೆಯಲ್ಲಿ ಎರಡು ಒಲೆ ಉರಿಯತೊಡಗಿದವು. ಒಬ್ಬರ ಮುಖ ಮತ್ತೊಬ್ಬರು ನೋಡಲಾರದೆ ಎರಡು ಬಾಗಿಲು ಮೂಡಿದವು. ಚಳಿಗಾಲ, ಬೇಸಿಗೆಯ ನಂತರ ಬರಬೇಕಾದ ಮಳೆಗಾಲ ಆ ವರ್ಷ ಬರಲೇ ಇಲ್ಲ. ಅಣ್ಣನ ಜೊತೆ ಜಗಳವಾಡಿ, ತಾನೇ ಈ ಬಾರಿ ಉತ್ತು ಬಿತ್ತೋಣ ಎಂದುಕೊಂಡಿದ್ದ ಶ್ರೀಕಂಠನಿಗೆ ಒಂಟಿಯಾಗಿ ವ್ಯವಸಾಯ ಮಾಡುವುದು ಎಷ್ಟು ಕಷ್ಟವೆಂದು ಆಗ ಅರಿವಾಗತೊಡಗಿತು. ಆಳುಗಳು ಸಿಗದೆ, ಸಿಕ್ಕರೂ ಸರಿಯಾಗಿ ಕೆಲಸ ಮಾಡದೆ, ಉದುರಿದ ಒಂದಷ್ಟು ಹನಿಗೆ ಬಿತ್ತನೆ ಮಾಡಿದರೂ ಮೊಳಕೆ ಭೂಮಿಯಿಂದ ಹೊರಗೇ ಬಾರದೆ, ಬರಗಾಲವು ಎಡಗಾಲಿಟ್ಟು ಒಳಗೆ ಬಂತು. ಜೊತೆಯಲ್ಲಿದ್ದಾಗ ಯಾರಿಗೂ ಕಷ್ಟಗಳ ಪರಿಚಯವಾಗದಂತೆ ಸಂಸಾರವನ್ನು ಸರಿದೂಗಿಸುತ್ತಿದ್ದ ನಂಜುಂಡನಂತೆ ಸಂಸಾರವನ್ನು ಕಷ್ಟಗಳಿಂದ ಪಾರು ಮಾಡುವ ಸಾಮರ್ಥ್ಯ ಶ್ರೀಕಂಠನಿಗೆ ಇರಲಿಲ್ಲ. ನಂಜುಂಡನ ರಕ್ಷಣೆಯಿಲ್ಲದೆ ವ್ಯವಸಾಯಕ್ಕೆ ಹೊರಟ ಶ್ರೀಕಂಠನದು ಶ್ರೀಕೃಷ್ಣನ ಸಾರಥ್ಯವಿಲ್ಲದೆ ಯುದ್ಧರಂಗಕ್ಕೆ ಹೊರಟ ಅರ್ಜುನನಂತಾಯಿತು. ಕಷ್ಟಗಳಿಗೆ ಪ್ರಥಮ ಬಾರಿಗೆ ತನ್ನನ್ನು ತೆರೆದುಕೊಂಡ ಶ್ರೀಕಂಠನಿಗೆ ಸಂಸಾರ ನಡೆಸುವುದೇ ಕಷ್ಟವಾಗತೊಡಗಿತು. ನಂಜುಂಡನು ತಮ್ಮನ ಸಂಸಾರಕ್ಕೆ ಸಹಾಯಹಸ್ತ ಚಾಚಲು ಪ್ರಯತ್ನಿಸಿದರೂ, ಶ್ರೀಕಂಠನ ಅಹಂಕಾರವು ಅದನ್ನು ಸ್ವೀಕರಿಸಲು ನಿರಾಕರಿಸಿತು. ಇದರ ಪರಿಣಾಮ ಮನೆಯಲ್ಲಿ ಆರ್ಥಿಕ ಸಂಕಷ್ಟ, ಬಡತನದ ನರಕ ದರ್ಶನ. ಅಣ್ಣನಿಗೆ ಸೆಡ್ಡುಹೊಡೆದು ಬದುಕಬೇಕೆಂದಿದ್ದವನನ್ನು ಬರಗಾಲವು ಹೊಡೆದು ಮಕಾಡೆ ಮಲಗಿಸಿತ್ತು.

ಶ್ರೀಕಂಠನಿಗೆ ತನಗೆದುರಾದ ಬರಗಾಲದ ಕಷ್ಟಗಳಿಗಿಂತಲೂ ಹೆಚ್ಚಾಗಿ, ಅಣ್ಣನಿಗೆ ಸವಾಲೆಸೆದು ನಿನ್ನ ನೆರವಿಲ್ಲದೆ ಬದುಕಿ ತೋರಿಸುತ್ತೇನೆಂದು ಹೇಳಿ ಬಂದ ಆತನೆದುರಿಗೆ ತನ್ನಿಡೀ ಸಂಸಾರ ಕಷ್ಟಕ್ಕೆ ಬೀಳಬೇಕಾಗಿ ಬಂತಲ್ಲ, ಆತನ ಎದುರಿಗೆ ತಾನು ಕೇವಲವಾದೆನಲ್ಲ ಎಂಬ ಅಪಮಾನವೇ ಹೆಚ್ಚಾಗಿತ್ತು. ಆದರೆ, ನಂಜುಂಡನಿಗೆ ತಮ್ಮನ ಕಷ್ಟದಲ್ಲಿ ತಾನು ಬೆಂಕಿ ಕಾಯಿಸಿಕೊಳ್ಳಬೇಕು ಎಂಬ ಅಭಿಲಾಷೆ ಏನೂ ಇರಲಿಲ್ಲ. ಆದರೂ, ಶ್ರೀಕಂಠನಿಗೆ ಹೀಗೆ ಸರೀಕರ ಎದುರಲ್ಲಿ ಕಷ್ಟಪಡುತ್ತಾ ಅವರ ದೃಷ್ಟಿಯಲ್ಲಿ ಕೇವಲವಾಗುವುದಕ್ಕಿಂತ, ಹತ್ತುಪಟ್ಟು ಕಷ್ಟವಾದರೂ ಸರಿ, ಮರೆಯಾಗಿ ಎಲ್ಲೋ ದೂರದ ಬೆಂಗಳೂರಿನಲ್ಲಿ ಬದುಕಬೇಕೆಂದು, ಊರು ಖಾಲಿ ಮಾಡುವ ನಿರ್ಧಾರಕ್ಕೆ ಬಂದ. ಆದರೆ, ನಂಜುಂಡ, "ಯಾಕಪ್ಪಾ ಬೆಂಗಳೂರು? ಅದೇನಿದ್ರೂ ಶೋಕಿ ಮಾಡೋರಿಗೆ. ಮಣ್ಣು ನಂಬಿರೋರು ನಾವು. ಹೆದ್ರುಕೋಬೇಡ, ಜೊತೆಯಾಗಿ ಕೆಲಸ ಮಾಡಿದ್ರೆ ಇಂಥ ಹತ್ತು ಬರಗಾಲ ಎದುರಿಸಬೋದು" ಎಂದ. "ಮಣ್ಣನ್ನು ನಂಬಿದ್ದಕ್ಕೇ ಅದು ನಮ್ಮ ಬಾಯಿಗೆ ಬಿದ್ದಿದ್ದು" ಎಂದು ಶ್ರೀಕಂಠನು ಹಿಡಿದ ಹಟವನ್ನು ಬಿಡಲೊಪ್ಪದೆ ಬೆಂಗಳೂರು ಸೇರಿದ. ಬೇಕೆಂತಲೇ ಅಣ್ಣನಿಗಾಗಲೀ, ಊರಿನ ಯಾರಿಗೂ ತಾನಿರುವ ವಿಳಾಸವನ್ನು ಕೊಟ್ಟಿರಲಿಲ್ಲ. ಹಳ್ಳಿಯಲ್ಲಿದ್ದ ತಮ್ಮ ಕೊಟ್ಟಿಗೆಯಷ್ಟು ಜಾಗವನ್ನು ಇಲ್ಲಿ ಹಾಲು, ಅಡುಗೆಮನೆ, ಬೆಡ್‌ರೂಮ್ ಎಂದು ಮೂರು ಭಾಗಗಳಾಗಿ ವಿಂಗಡಿಸಿದ್ದರು. ದಿನವಿಡೀ ಬಿಸಿಲಿನಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಾ, ಸಂಜೆ ಹೆಂಡತಿ ಮಗಳೊಂದಿಗೆ ಆ ವಠಾರದ ಪುಟ್ಟ ಮನೆಯಲ್ಲಿ ಜೀವನ ಸಾಗಿಸುತ್ತಿದ್ದನು.